■ ಹನಿ

## ವಿಶಿಗೆ ವಯಸ್ಸಾಯಿತು!

**40**ರ ಹರೆಯದ ಸಚಿನ್ ತೆಂಡೂಲ್ಕರ್ ಮೊನ್ನೆಯಷ್ಟೇ ನಿವೃತ್ತಿ ಘೋಷಿಸಿ ಆಯಿತು. ಆದರೆ ಚೆಸ್ ಎನ್ನುವುದು ಕ್ರಿಕೆಟ್‌ನಂತಲ್ಲ. ಚೆಸ್‌ನಲ್ಲಿ ವಿಶ್ವ ಚಾಂಪಿಯನ್ನರು ನಿವೃತ್ತಿ ಪ್ರಕಟಿಸುವುದಿಲ್ಲ, ಬದಲಾಗಿ ಹೊಸ ಸ್ಪರ್ಧಿಗಳು ಚಾಂಪಿಯನ್ನರನ್ನು ಪದಚ್ಯುತಗೊಳಿಸುತ್ತಾರೆ. ನಮ್ಮ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್‌ಗೂ ಈಗ ಅದೇ ಆಗಿದೆ. 43 ವರ್ಷ ವಯಸ್ಸಿನ ವಿಶಿ, 22ರ ಹರೆಯದ ಹುಡುಗ ನಾರ್ವೆಯ ಮ್ಯಾಗ್ನಸ್ ಕಾರ್ಲ್ ಸನ್ ವಿರುದ್ಧ ಸೋಲೊಪ್ಪಿ ವಿಶ್ವ ಚಾಂಪಿಯನ್ ಪಟ್ಟ ಬಿಟ್ಟುಕೊಟ್ಟಿದ್ದಾರೆ. ಚೆಸ್ ತಜ್ಞರ ಪ್ರಕಾರ, 'ವಿಶಿಗೆ ವಯಸ್ಸಾಗಿದೆ. ಇವತ್ತಿಗೂ ಆಕ್ರಮಣಕಾರಿ ವ್ಯೂಹಗಳನ್ನು ರಚಿಸುವ ವಿಶಿ ಆಟದ ಕೊನೆಯಲ್ಲಿ ವೇಗ ಮತ್ತು ಲೆಕ್ಕಾಚಾರ ಕಳೆದುಕೊಳ್ಳುತ್ತಿದ್ದಾರೆ.'

ಚದುರಂಗದಲ್ಲಿ ಭಾರತಕ್ಕೆ ಅತಿದೊಡ್ಡ ಗೌರವವನ್ನು ತಂದುಕೊಟ್ಟಾತ ಈ ವಿಶಿ. ಐದು ಬಾರಿ ವಿಶ್ವ ಚಾಂಪಿಯನ್ ಆಗುವುದೆಂದರೆ ಸುಲಭದ ಮಾತಲ್ಲ. 2007ರಿಂದ 13ರವರೆಗೆ ವಿಶ್ವ ಚೆಸ್‌ನಲ್ಲಿ ಅನಭಿಷಿಕ್ತ ದೊರೆಯಾಗಿ ಮೆರೆದಾತ. 6 ಸಲ 'ಚೆಸ್ ಆಸ್ಕರ್' ಪ್ರಶಸ್ತಿ ಗೆದ್ದು-ಕೊಂಡಾತ. ಚೆನ್ನೈ ಬಳಿಯ ಮಯಿಲಾಡುತುರೈ ಎಂಬ ಪುಟ್ಟ ಹಳ್ಳಿಯಿಂದ ಬಂದು ರ್‍ಯಾಪಿಡ್ ಚೆಸ್ ನಲ್ಲಿ ವಿಶ್ವದ ಸಾರ್ವಕಾಲಿಕ ಅಗ್ರಮಾನ್ಯ ಆಟಗಾರನಾದದ್ದು ವಿಶಿಯ ಸಾಧನೆ. ಫಿಡೆ ರೇಟಿಂಗ್ ಲಿಸ್ಟ್‌ನಲ್ಲಿ 2800ರ ಗಡಿ ದಾಟಿದ ವಿಶ್ವದ ಆರು ಆಟಗಾರರಲ್ಲಿ ವಿಶಿಯೂ ಒಬ್ಬರು. ಅವರ ಪ್ರತಿಭೆಗೆ ರಾಜೀವ್ ಗಾಂಧಿ ಖೇಲ್ ರತ್ನ , ಪದ್ಮವಿಭೂಷಣ ಪ್ರಶಸ್ತಿಗಳೂ ಲಭಿಸಿದವು. ಬಿಕಾಂ ಪದವೀಧರ ವಿಶಿ, ಸೂಕ್ಷ್ಮ ಮನಸ್ಸಿನ ಮಿತಭಾಷಿ. ವಿವಾದ ಉಂಟಾದಾಗ, ಹೈದರಾಬಾದ್ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ನಿರಾಕರಿಸಿದ ಜೆಂಟಲ್‌ಮ್ಯಾನ್. ಪ್ರಧಾನಿ ಮನಮೋಹನ್‌ಸಿಂಗ್ ಅವರು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾರಿಗೆ ಔತಣಕೂಟ ನೀಡಿದಾಗ, ಭಾರತದ ಕ್ರೀಡಾಕ್ಷೇತ್ರದಿಂದ ಆಹ್ವಾನ ಪಡೆದ ಏಕೈಕ ಕ್ರೀಡಾಪಟು ಈತ ಎನ್ನುವುದು ಈತನಿಗೆ ಇರುವ ಗೌರವವನ್ನು ಸೂಚಿಸುತ್ತದೆ. ಆಟದಲ್ಲಿ ಸೋಲು ಸಹಜ. ಇನ್ನೇನು ಒಂದೆರಡು ಟೂರ್ನಿಗಳಲ್ಲಿ ವಿಶಿ ಗೆಲ್ಲಬಹುದಾದರೂ, ವಿಶ್ವ ಚಾಂಪಿಯನ್ ಪಟ್ಟ ಮರಳಿ ಗಳಿಸುವುದು ಕಷ್ಟ. ಯುವಕರ ಬುದ್ಧಿಮತ್ತೆಗೆ ಸವಾಲೆಸೆಯುವುದು ಇನ್ನೂ ಕಷ್ಟ. ●





## ಚೆಟ್ರಿ ದಾಖಲೆ

**29**ರ ಹರೆಯದ ಸುನಿಲ್ ಚೆಟ್ರಿ ಭಾರತದ ಫುಟ್‌ಬಾಲ್ ರಂಗದ ಹೊಸ ಆಶಾಕಿರಣ. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತದ ಪರ ಅತ್ಯಧಿಕ ಗೋಲುಗಳನ್ನು ಹೊಡೆದ ಹೊಸ ದಾಖಲೆಯನ್ನು ಚೆಟ್ರಿ ಇದೀಗ ಬರೆದಿದ್ದಾರೆ. ಈವರೆಗೆ 80 ಪಂದ್ಯಗಳಲ್ಲಿ ಒಟ್ಟು 43 ಗೋಲುಗಳನ್ನು ಸುನಿಲ್ ದಾಖಲಿಸಿದ್ದಾರೆ. ಭಾರತ ತಂಡದ ನಾಯಕನಾಗಿ ಇನ್ನೂ ಆಡುತ್ತಿದ್ದು, ಸದ್ಯದಲ್ಲೇ ಇನ್ನಷ್ಟು ಅಂತರರಾಷ್ಟ್ರೀಯ ಪಂದ್ಯಗಳು ಇರುವುದರಿಂದ ಈ ದಾಖಲೆಯನ್ನು ಉತ್ತಮ ಪಡಿಸುವ ಅವಕಾಶ ಚೆಟ್ರಿಗೆ ಹೇರಳವಾಗಿದೆ.

ಭಾರತ ಈವರೆಗೆ ಕಂಡ ಅತ್ಯುತ್ತಮ ಫುಟ್ಬಾಲ್ ಪಟು ಬೈಚುಂಗ್ ಭುಟಿಯಾನ ಶಿಷ್ಯ ಈ ಸುನಿಲ್ ಚೆಟ್ರಿ. ಇಬ್ಬರೂ ಭಾರತಕ್ಕಾಗಿ ಒಟ್ಟಿಗೇ ಆಡಿದವರು. ಸೆಕುಂದರಾಬಾದ್‌ನ ಚೆಟ್ರಿ, ಭುಟಿಯಾನ 42 ಗೋಲುಗಳ ದಾಖಲೆಯನ್ನೇ ಮುರಿದು ಗುರುವಿಗೆ ತಕ್ಕ ಶಿಷ್ಯ ಎಂಬ ಹೆಸರು ಪಡೆದಿದ್ದಾನೆ. 2007, 09 ಮತ್ತು 12ರಲ್ಲಿ ಭಾರತ ನೆಹ್ರೂ ಕಪ್ ಗೆಲ್ಲುವಲ್ಲಿ ಸುನಿಲ್ ಮಹತ್ವದ ಪಾತ್ರ ವಹಿಸಿದ್ದ. 2011ರ ಸಾಫ್ ಚಾಂಪಿಯನ್‌ಷಿಪ್‌ನಲ್ಲೂ ಸುನಿಲ್ ಆಟ ಭಾರತಕ್ಕೆ ವರದಾನವಾಗಿತ್ತು.

ಗುರು ಭುಟಿಯಾನಂತೆಯೇ ವಿದೇಶೀ ಕ್ಲಬ್‌ಗಳಲ್ಲಿ ಆಟವಾಡುವ ಅವಕಾಶಗಳ ಮೂಲಕ ಚೆಟ್ರಿ ತನ್ನ ಆಟದ ಮೊನಚನ್ನು ಹೆಚ್ಚಿಸಿಕೊಂಡಿದ್ದಾನೆ. 2010ರಲ್ಲಿ ಕನ್ಸಾಸ್ ಸಿಟಿ ವಿಜಾರ್ಡ್ಸ್ ಕ್ಲಬ್ ಪರವಾಗಿ ಆಟವಾಡಿದ ಚೆಟ್ರಿ, ಕೋಲ್ಕತ್ತಾದ ಮೋಹನ್ ಬಾಗನ್ ಕ್ಲಬ್‌ನಲ್ಲೂ ಸಾಕಷ್ಟು ಅನುಭವ ಪಡೆದುಕೊಂಡಿದ್ದಾನೆ. ಭಾರತದ ಇನ್ನೊಬ್ಬ ಪ್ರತಿಭಾವಂತ ಆಟಗಾರ ಐ.ಎಂ.ವಿಜಯನ್ ಈಗಾಗಲೆ 79 ಪಂದ್ಯಗಳಿಂದ 40 ಗೋಲುಗಳನ್ನು ಹೊಡೆದಿದ್ದು ಚೆಟ್ರಿಯ ಬೆನ್ನಲ್ಲೇ ಇರುವುದೂ ಕುತೂಹಲಕರ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65